<u>ಅಸಲು ದಾವಾ ಸಂಖ್ಯೆ: **181/2014**</u> ಡಿ.ಡಬ್ಲ್ಯೂ:- **1**

ದಿನಾಂಕಃ **26.03.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ನಿಂಗರಾಜಪ್ಪರವರ ತಂದೆಯ ಹೆಸರು ನಿಂಗರಾಜು. ನಿಂಗರಾಜಪ್ಪರವರ ತಾಯಿಯ ಹೆಸರು ಶಾಂತಮ್ಮ. ವಾದಿಯು ಈ ದಾವೆಯನ್ನು ಸರ್ವೇ ನಂ.67/4 ಪಿ1 ರ ಆಸ್ತಿಗೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿದ್ದಾರೆ. ವಾದಿಯವರ ಆಸ್ತಿಯನ್ನು ನಾವು ಒತ್ತುವರಿ ಮಾಡಿದ್ದೇವೆ ಎಂದು ನಮ್ಮ ವಿರುದ್ಧ ದಾವೆಯನ್ನು ಸಲ್ಲಿಸಿದ್ದಾರೆ. ಈ ದಾವೆಯನ್ನು ಸಲ್ಲಿಸಿದ ಪ್ರಾರಂಭಿಕ ಹಂತದಲ್ಲಿ ನ್ಯಾಯಾಲಯದಿಂದ ಸಮನ್ಸ್ ಪಡೆದುಕೊಂಡು ನಾನು ಮತ್ತು ನನ್ನ ತಂದೆಯವರು ನ್ಯಾಯಾಲಯದಲ್ಲಿ ವಕೀಲರ ಮೂಲಕ ಹಾಜರಾಗಿದ್ದೆವು. ಆ ಸಮಯದಲ್ಲಿ ನಾವು ನೇಮಕ ಮಾಡಿಕೊಂಡ ವಕೀಲರು ತೀರಿಕೊಂಡಿದ್ದರಿಂದ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ತೀರಿಕೊಂಡ ವಕೀಲರ ಹೆಸರು ಈಗ ನೆನಪಿಗೆ ಬರುತ್ತಿಲ್ಲ. ವಕೀಲರು ತೀರಿಕೊಂಡ ನಂತರ ಶ್ರೀನಿವಾಸಮೂರ್ತಿ ವಕೀಲರನ್ನು ನೇಮಕ ಮಾಡಿಕೊಂಡಿದ್ದೆವು. ಶ್ರೀನಿವಾಸಮೂರ್ತಿ ವಕೀಲರನ್ನು ನೇಮಕ ಮಾಡಿಕೊಂಡ ನಂತರ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಈ ಮೊದಲು ದಾವೆಯು ವಾದಿಯರ ಪರವಾಗಿ ಡಿಕ್ರಿಯಾಗಿತ್ತು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಒಟ್ಟು 1 ಎಕರೆ 38 ಗುಂಟೆ ಅದರ ಜೊತೆಯಲ್ಲಿ 6 ಗುಂಟೆ ಕರಾಬು ಇದೆ ಎಂದರೆ ಸರಿ. 2014 ಮತ್ತು ಅದಕ್ಕೂ ಪೂರ್ವದಲ್ಲಿ ದಾವಾ ಆಸ್ತಿಯ ಖಾತೆ ಮತ್ತು ಪಹಣಿ ರಾಮಪ್ಪ ಬಿನ್ ಹಳದಪ್ಪ, ಶಾಂತಮ್ಮ ಕೋಂ ನೀಲಪ್ಪ, ವೀರಪ್ಪ, ರುದ್ರಪ್ಪ ಮತ್ತು ರಾಧಮ್ಮ ರವರ ಹೆಸರಿಗೆ ಜಂಟಿಯಾಗಿ ಇತ್ತು ಎಂದರೆ ಸರಿ. 1 ಎಕರೆ 38 ಗುಂಟೆ ಜಮೀನಿನಲ್ಲಿ 10 ಗುಂಟೆ ಜಮೀನು ತುಂಗಾಭದ್ರಾ ನಾಲೆಗೆ ಭೂಸ್ವಾಧೀನವಾಗಿರುತ್ತದೆ. ಸರ್ವೇ ನಂ.67/4 ಪಿ1 ರಲ್ಲಿ ಒಟ್ಟು 3 ಎಕರೆ 36 ಗುಂಟೆ ಜಮೀನು ಮೂಲತಃ ಶಾಂತಮ್ಮರವರ ಹೆಸರಿನಲ್ಲಿತ್ತು. ಶಾಂತಮ್ಮರವರು 1952-53 ನೇ ಸಾಲಿನಲ್ಲಿ ಸರ್ವೇ ನಂ.67/4 ಪಿ1 ರಲ್ಲಿ 3 ಎಕರೆ 36 ಗುಂಟೆ ಜಮೀನನ್ನು ವೀರಪ್ಪ ಮತ್ತು ರುದ್ರಪ್ಪರವರಿಗೆ ಮಾರಾಟ ಮಾಡಿದ್ದಾರೆ. ನಿಪಿ-19 ರ ಆರ್ ಟಿ ಸಿ ಯಲ್ಲಿ ಸರ್ವೇ ನಂ.67/4 ರ ಆಸ್ತಿಯು ಕಲಂ ನಂ.9 ರಲ್ಲಿ ನೀಲಪ್ಪ ಬಿನ್ ನೀಲಪ್ಪರವರ ಹೆಸರು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಈಗ ಸದರಿ ಆಸ್ತಿಯು ನೀಲಪ್ಪರವರ ಹೆಸರಿನಲ್ಲಿ

ಇರುವುದಿಲ್ಲ. ಸಾಕ್ಷಿಗೆ ಸರ್ವೇ ನಂ.67/4 ರ ಆಸ್ತಿಯನ್ನು ಶಾಂತಮ್ಮ ಕೋಂ ನೀಲಪ್ಪರವರು ಮಾರಾಟ ಮಾಡಿದರೋ ಅಥವಾ ನೀಲಪ್ಪ ಬಿನ್ ನೀಲಪ್ಪರವರು ಮಾರಾಟ ಮಾಡಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ಶಾಂತಮ್ಮ ಕೋಂ ನೀಲಪ್ಪರವರು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸರ್ವೇ ನಂ.67/4 ರ ಆಸ್ತಿಯನ್ನು ಶಾಂತಮ್ಮರವರು ಮಾರಾಟ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಶಾಂತಮ್ಮರವರು ಮಾರಾಟ ಮಾಡಿದ ಕ್ರಯ ಪತ್ರಕ್ಕೆ ಅವರ ಮಗನಾದ ನಿಂಗರಾಜಪ್ಪರವರು ಸಹಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ನೀಲಪ್ಪರವರು ಮರಣಹೊಂದಿದ ನಂತರ ಪೌತಿ ಆಧಾರದ ಮೇಲೆ ಶಾಂತಮ್ಮರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಶಾಂತಮ್ಮರವರು ಆಸ್ತಿಯನ್ನು ಎಕರೆ ಆಧಾರದ ಮೇಲೆ ಮಾರಾಟ ಮಾಡಿರುತ್ತಾರೆ. ಶಾಂತಮ್ಮರವರು ಈಗ ಜೀವಂತ ಇರುವುದಿಲ್ಲ. ಶಾಂತಮ್ಮರವರು ಸರ್ವೇ ನಂ.67/4 ರಲ್ಲಿ 3 ಎಕರೆ 36 ಗುಂಟೆ ಜಮೀನನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಶಾಂತಮ್ಮರವರು ತೀರಿಕೊಂಡ ನಂತರ ಸರ್ವೇ ನಂ.67/4 ರ ಆಸ್ತಿಯು ಪೌತಿ ಖಾತೆಯ ಆಧಾರದ ಮೇಲೆ ನಿಂಗರಾಜಪ್ಪರವರ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ಸರ್ವೇ ನಂ.67/4 ರ ಆಸ್ತಿಯ ಪಹಣಿ ಈಗ ಯಾರ ಹೆಸರಿನಲ್ಲಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.